**ದಿನಾಂಕಃ 09.01.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಎದುರುದಾರರ ಪರ ವಕೀಲರಿಂದಃ**

2. ಓ.ಎಸ್. ನಂ. 7/2006 ರಲ್ಲಿ ನನ್ನ ಮೇಲೆ ಸಮನ್ಸ್ ಜಾರಿಯಾಗಿದ್ದರೂ ನಾನು ಕೋರ್ಟಿಗೆ ಹಾಜರಾಗಿರಲಿಲ್ಲ ಎಂದರೆ ನನಗೆ ಸಮನ್ಸ್ ಬಂದಿರಲೇ ಇಲ್ಲ. ನನಗೆ ಸಮನ್ಸ್ ಜಾರಿಯಾಗಿದ್ದು ನಾನು ಹಾಜರಾಗದೇ ಇದ್ದಿದ್ದರಿಂದ ನನ್ನನ್ನು ನ್ಯಾಯಾಲಯ ಏಕಪಕ್ಷೀಯ ಮಾಡಿತ್ತು ಎಂದರೆ ಸರಿಯಲ್ಲ. ನಂತರ ಆ ದಾವೆಯಲ್ಲಿ ದಿನಾಂಕ 30.09.2006 ರಂದು ವಾದಿಗಳ ಪರವಾಗಿ ಡಿಕ್ರಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ಡಿಕ್ರಿಯಾಗಿದ್ದ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಗೊತ್ತಿರಲಿಲ್ಲ. ನಂತರ ಎಫ್.ಡಿ.ಪಿ ನಂ. 2/2009 ರಲ್ಲಿ ಕೂಡಾ ನನಗೆ ನೋಟೀಸ್ ಜಾರಿಯಾಗಿತ್ತು ಎಂದರೆ ಸರಿಯಲ್ಲ. ನನಗೆ ಸಮನ್ಸ್ ಮತ್ತು ನೋಟೀಸ್ ಜಾರಿಯಾಗದೇ ಇದ್ದ ಬಗ್ಗೆ ಅವುಗಳ ಕಾಪಿ ಪಡೆದುಕೊಂಡು ಹಾಜರು ಮಾಡಿದ್ದೀನಾ? ಎಂದರೆ ಇಲ್ಲ. ಅಂತಿಮ ಡಿಕ್ರಿ ಪ್ರಕರಣದಲ್ಲಿ ಅಳತೆ ಮಾಡಲು ಬರುವ ಮುಂಚೆ ಸರ್ವೇಯರ್ ಮತ್ತು ಇಂಜಿನಿಯರ್ ನನಗೆ ನೋಟೀಸ್ ಜಾರಿ ಮಾಡಿದ್ದರು ಎಂದರೆ ನನಗೆ ಯಾವುದೂ ಬಂದಿಲ್ಲ. ಹೊಲಗಳು ಮತ್ತು ಮನೆ ಬಳಿ ಕೋರ್ಟ್ ಕಮೀಷನರ್ ಅಳತೆ ಮಾಡಲು ಬಂದಾಗ ನಾನು ಗಲಾಟೆ ಮಾಡಿದ್ದೆ ಎಂದರೆ ನನ್ನ ಹೆಸರಿನಲ್ಲಿ ಹೊಲವೂ ಇಲ್ಲ ಮತ್ತು ಮನೆಯೂ ಇಲ್ಲ ನಾನು ಯಾಕೆ ಗಲಾಟೆ ಮಾಡಲಿ? ಓ.ಎಸ್.ನಂ.7/2006 ರ ರಲ್ಲಿನ ಆಸ್ತಿಗಳಿಗೂ ಮತ್ತು ನನಗೂ ಸಂಬಂಧವಿಲ್ಲವೇ? ಎಂದರೆ ಇಲ್ಲ. ಎಫ್.ಡಿ.ಪಿ. ನಂ. 2/2009 ರಲ್ಲಿ ಅಂತಿಮ ಡಿಕ್ರಿ ಬರೆಯುವಂತೆ ದಿನಾಂಕ 01.10.2011 ರಂದು ಆದೇಶವಾಗಿದೆ ಎಂದರೆ ನನಗೆ ಅದ್ಯಾವುದೂ ಗೊತ್ತಿಲ್ಲ. ಈ ವಿಚಾರಗಳು ನನಗೆ ಯಾವಾಗ ಗೊತ್ತಾಯಿತು? ಎಂದರೆ ಇವರು ಆಕ್ಷೇರ್ ಮಾಡಿಕೊಳ್ಳಲು ಬಂದಾಗಲೇ ಗೊತ್ತಾಯಿತು. ಆಕ್ಷೇರ್ ಮಾಡಿಕೊಳ್ಳಲು ಬಂದ ಜಮೀನು ಮತ್ತು ಮನೆ ನನ್ನ ಹೆಸರಿನಲ್ಲಿ ಇರುವುದಿಲ್ಲ. ಹಾಗಾದರೆ ನಾನು ಮುಖ್ಯವಿಚಾರಣೆಯಲ್ಲಿ ಏನು ಬರೆಸಿದ್ದೇನೆಂದು ನನಗೆ ಮಾಹಿತಿ ಇದೆಯೇ? ಎಂದರೆ ಸಾಕ್ಷಿಯು ಹೊಲ ಮತ್ತು ಮನೆಯ ಮಾಲೀಕರು ಅವರ ಆಸ್ತಿ ಮೇಲೆ ಆದೇಶವಾಗಿದೆ ಇದನ್ನು ಬಗೆಹರಿಸಿಕೊಡು ಎಂದು ನನ್ನನ್ನು ಕೇಳಿದ್ದರಿಂದ ಕೋರ್ಟಿಗೆ ಬಂದಿದ್ದೇನೆ ಎಂದು ಹೇಳಿದ್ದಾರೆ. ಅಪೀಲು ಮತ್ತು ಮುಖ್ಯವಿಚಾಾರಣೆಯಲ್ಲಿ ಆಸ್ತಿಯ ಮಾಲೀಕರು ಬಗೆಹರಿಸಿಕೊಡು ಎಂದು ಕೇಳಿದ್ದರಿಂದ ಅಪೀಲು ಸಲ್ಲಿಸಿದ್ದೇನೆ ಎಂದರೆ ಬರೆಯಿಸಿದ್ದೀರಾ? ಎಂದರೆ ಬರೆಯಿಸಿದ್ದೇನೆ. ಸಾಕ್ಷಿಯು ಈ ದಾವೆಯ ಆಸ್ತಿಗಳ ಪಹಣಿ ಮತ್ತು ಮನೆಯ ಖಾತೆ ಯಾವುದೂ ನನ್ನ ಹೆಸರಿನಲ್ಲಿ ಇಲ್ಲವೆಂದು ಹೇಳಿದ್ದಾರೆ. ನನಗೆ ಈ ದಾವೆಯ ವಿಚಾರ ಯಾವಾಗ ಗೊತ್ತಾಯಿತು? ಎಂದರೆ 2025 ರ ಜೂನ್ ತಿಂಗಳಿನಲ್ಲಿ ಆಕ್ಷೇರ್ ಮಾಡಿಕೊಳ್ಳಲು ಬಂದಿದ್ದಾಗ ಗೊತ್ತಾಯಿತು. ಕೆಳಗಿನ ನ್ಯಾಯಾಲಯದ ಎಲ್ಲಾ ದಾಖಲೆಗಳನ್ನು ಪೀಜು ಕಟ್ಟಿ ಪ್ರತಿ ಪಡೆದುಕೊಂಡು ಅಪೀಲಿನಲ್ಲಿ ಹಾಜರು ಮಾಡಿದ್ದೇನೆ. ವಾದಿಗಳಿಗೆ ಅವರ ಹಿಸ್ಸೆ ಪ್ರಕಾರ ಅಂತಿಮ ಡಿಕ್ರಿ ಆದೇಶದಂತೆ ಅವರ ಹೆಸರಿಗೆ ಖಾತೆ ಆಗಿದೆ ಎಂದರೆ ಆಗಿಲ್ಲ. ವಾದಿಗಳ ಹೆಸರಿನಲ್ಲಿ ಖಾತೆಯಾಗಿದ್ದರೂ ಅದು ನನಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಡಿಕ್ರಿಯಾಗಿ ಸುಮಾರು 17 ವರ್ಷ ಕಳೆದ ನಂತರ ಸುಳ್ಳು ಅಪೀಲು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಆಸ್ತಿಗಳು ಸಂಬಂಧವಿಲ್ಲದಿದ್ದರೂ ಆಸ್ತಿಗಳ ಮೂಲ ಮಾಲೀಕರು ಕೇಳಿದ್ದರಿಂದ ಈ ಅಪೀಲು ಸಲ್ಲಿಸಿದ್ದೇನೆ. ನನಗೆ

ಎಲ್ಲಾ ವಿಚಾರ ಗೊತ್ತಿದ್ದರೂ ದಾವೆಯಲ್ಲಿ ಹಾಗೂ ಎಫ್.ಡಿ.ಪಿ ಯಲ್ಲಿ ಸಮನ್ಸ್ ಜಾರಿಯಾಗಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹೂವಿನ ಹಡಗಲಿ.**